ಸೋಮವಾರ,02.03.2026
ಬೆಂಗಳೂರು, ಬೆಲೆ: 5ರೂ,2 ಪುಟಗಳು
ಸಂಪುಟ 01 – ಸಂಚಿಕೆ 157

Digital Varthe Kannada Daily
Volume 01 - Issue 157
Monday 02.03.2026
Price: 5/- Rs
2 Pages Bangalore

PRGI/RNI: KNKAN/25/A1348

# ಡಿಜಿಟಲ್ ವಾರ್ತೆ

ಕನ್ನಡ ದಿನಪತ್ರಿಕೆ
ಕನ್ನಡಿಗರ ಶಕ್ತಿ

DIGITAL VARTHE
digitalvarthe@gmail.com
www.digitalvarthe.com

## ಪ್ರಿಯತಮೆ ಆತ್ಮಹತ್ಯೆ:ಮನನೊಂದು ಪ್ರಿಯಕರನೂ ನೇಣಿಗೆ ಶರಣು




**ಬೆಂಗಳೂರು:** ಪ್ರಿಯ ತಮೆ ಆತ್ಮಹತ್ಯೆ ಮಾಡಿಕೊಂಡಿದ್ದಕ್ಕೆ ಮನ ನೊಂದ ಪ್ರಿಯಕರ ವಿಡಿಯೋ ದಾಖಲಿಸಿ, ಪತ್ರ ಬರೆದು ತಾನೂ ನೇಣ ಬಿಗಿದು ಕೊಂಡು ಆತ್ಮಹತ್ಯೆ ಮಾಡಿ ಕೊಂಡಿರುವ ಘಟನೆ ಆನೇಕಲ್ ತಾಲ್ಲೂಕಿ ನಲ್ಲಿ ನಡೆದಿದೆ. ಘಟನೆ ಸಂಬಂಧ ಸೂರ್ಯ ನಗರ ಪೊಲೀಸ್ ಠಾಣೆ ನಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವ–ರಿದಿದೆ.

ಒಡಿಶಾ ಮೂಲದ ಮಂಜುಳಾ ಹಾಗೂ ದೀಪಾಂಕ್ ಆತ್ಮಹತ್ಯೆ ಮಾಡಿಕೊಂಡ ದಂಪತಿ ಗಳೆಂದು ಗುರುತಿಸಲಾಗಿದೆ. ದೀಪಾಂಕ್‌ಗೆ ಈ ಮೊದಲು ಮದುವೆ ಯಾಗಿದ್ದು, ಇಬ್ಬರು ಮಕ್ಕಳಿದ್ದರೂ ನಂತರ ಮಂಜುಳಾಳನ್ನು ವಿವಾಹ ವಾಗಿದ್ದಾನೆ ಎಂಬ ಮಾಹಿತಿ ಲಭ್ಯವಾಗಿದೆ. ಸುಮಾರು ಹದಿನೈದು ದಿನಗಳ ಹಿಂದೆ ಇಬ್ಬರೂ ಒಡಿಶಾದಿಂದ ಬೆಂಗಳೂರಿಗೆ ಬಂದು ಆನೇಕಲ್ ತಾಲ್ಲೂಕಿನ ಹೀಲಲಿಗೆ ಗ್ರಾಮದ ಲವಕುಶ ಲೇಔಟ್‌ನಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು.

ಹೊಟ್ಟೆಪಾಡಿಗಾಗಿ ದೀಪಾಂಕ್ ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರೆ, ಮಂಜುಳಾ ಸಮೀಪದ ಉಡುಪು ಕಾರ್ಖಾನೆಯಲ್ಲಿ ಉದ್ಯೋಗದಲ್ಲಿದ್ದರು. ಸಾಮಾನ್ಯ ಜೀವನ ನಡೆಸುತ್ತಿದ್ದ ದಂಪತಿಗಳ ನಡುವೆ ಇತ್ತೀಚೆಗೆ ವೈಯಕ್ತಿಕ ವಿಚಾರವಾಗಿ ಭಿನ್ನಾಭಿಪ್ರಾಯ ಉಂಟಾಗಿ ದ್ದೆಂದು ತಿಳಿದುಬಂದಿದೆ.

ಕಳೆದ ಮಂಗಳವಾರ ರಾತ್ರಿ ದೀಪಾಂಕ್ ಹಾಗೂ ಮಂಜುಳಾ ನಡುವೆ ಜಗಳ ನಡೆದಿತ್ತು. ಜಗಳದಿಂದ ಮನನೊಂದ ಮಂಜುಳಾ, ದೀಪಾಂಕ್ ಹೊರಗಡೆ ತೆರಳಿದ್ದ ವೇಳೆ ಮಧ್ಯರಾತ್ರಿ ನೇಣುಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎನ್ನಲಾಗಿದೆ. ಕೆಲಸ ಮುಗಿಸಿ ಮನೆಗೆ ಬಂದ ದೀಪಾಂಕ್ ಪತ್ನಿಯ ಶವವನ್ನು ಕಂಡು ಬೆಚ್ಚಿಬಿದ್ದಿದ್ದಾನೆ. ಪತ್ನಿಯ ಮೃತದೇಹದ ಮುಂದೆ ಅಳುತ್ತಲೇ ತನ್ನ ಮನಸ್ಥಿತಿಯನ್ನು ವಿವ–ರಿಸುವ ವಿಡಿಯೋ ದಾಖಲಿಸಿ, ಪತ್ರ ಬರೆದು ಬಳಿಕ ತಾನೂ ನೇಣಿಗೆ ಶರಣಾಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆ ಎರಡು ದಿನಗಳ ಹಿಂದೆಯೇ ಸಂಭವಿಸಿರಬಹುದು ಎಂಬ ಶಂಕೆಯನ್ನು ಪೊಲೀಸರು ವ್ಯಕ್ತಪಡಿಸಿದ್ದಾರೆ. ಮಾಹಿತಿ ತಿಳಿದ ತಕ್ಷಣ ಸ್ಥಳಕ್ಕೆ ಭೇಟಿ ನೀಡಿದ ಪೊಲೀಸರು ಪರಿಶೀಲನೆ ನಡೆಸಿ, ಇಬ್ಬರ ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ಅತ್ತಿಬೆಲೆ ಪ್ರದೇಶದ ಆಸ್ಪತ್ರೆಗೆ ರವಾನೆ ಮಾಡಿದ್ದಾರೆ.

ಸ್ಥಳಕ್ಕೆ ಉಪವಿಭಾಗೀಯ ಪೊಲೀಸ್ ಅಧಿಕಾರಿ ಹಾಗೂ ಸೂರ್ಯ ನಗರ ಪೊಲೀಸ್ ಠಾಣೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ದಂಪತಿಗಳ ನಡುವೆ ಉಂಟಾದ ಕಲಹವೇ ಈ ದುರಂತಕ್ಕೆ ಕಾರಣವೇ ಎಂಬ ದಿಕ್ಕಿನಲ್ಲಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಇಬ್ಬರ ಸಾವಿನಿಂದ ಸ್ಥಳೀಯರಲ್ಲಿ ಆತಂಕ ಮೂಡಿದ್ದು, ಕುಟುಂಬಸ್ಥರು ಹಾಗೂ ಬಂಧುಬಳಗ ಆಕ್ರಂದನ ವ್ಯಕ್ತಪಡಿಸಿದ್ದಾರೆ.

## ರಂಗನಾಥಪುರ ನಾಗರಾಜು ಅವರಿಗೆ ನುಡಿನಮನ ಕಾರ್ಯಕ್ರಮ



**ಕೃಷ್ಣರಾಜಪೇಟೆ:** ತಾಲೂಕಿನ ಬೂಕನಕೆರೆ ಹೋಬಳಿಯ ರಂಗನಾಥ–'ಪುರದ ಹಿರಿಯ ಮುಖಂಡರು ಹಾಗೂ ರಾಜಕೀಯ ಕ್ಷೇತ್ರದಲ್ಲಿ ಸತತ 40 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದ ರಂಗನಾಥಪುರ ನಾಗರಾಜು ಅವರ ನಿಧನದ ಹಿನ್ನೆಲೆಯಲ್ಲಿ ಅವರಿಗೆ ಗೌರವ ಸಲ್ಲಿಸಲು ಮಾರ್ಚ್ 3ರಂದು ನುಡಿನಮನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ,

ಇತ್ತೀಚೆಗೆ ಹೃದಯಾ ಘಾತದಿಂದ ನಿಧನರಾದ ನಾಗರಾಜು ಅವರು ಅಜಾತಶತ್ರು ಮತ್ತು ಮಾದಿಗ ಸಮಾಜದ ಹಿರಿಯ ಮಾರ್ಗದರ್ಶಕರಾಗಿ ಗುರುತಿಸಿಕೊಂಡಿದ್ದರು, ಅವರ ಸ್ಮರಣಾರ್ಥವಾಗಿ ಅವರ ಸ್ವಗ್ರಾಮವಾದ ರಂಗನಾಥಪುರದಲ್ಲಿ ಮಂಗಳವಾರ ದಿನಾಂಕ: 03-03-2026 ರಂದು ಸಮಯ ಮಧ್ಯಾಹ್ನ 12-00 ಗಂಟೆಗೆ ಈ ಕಾರ್ಯಕ್ರಮ ನಡೆಯಲಿದೆ,

ಆದರಿಂದ ಸಮಾಜದ ಎಲ್ಲಾ ಬಂಧುಗಳು ಹಾಗೂ ನಾಗಯ ರವರಯ ಅಭಿಮಾನಿಗಳು ಈ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಅಗಲಿದ ಹಿರಿಯ ಚೇತನಕ್ಕೆ ಶ್ರದ್ಧಾಂಜಲಿ ಅರ್ಪಿಸಬೇಕೆಂದು ಎಂದು ಮಾದಾರ ಮಹಾಸಭಾ ಮಂಡ್ಯ ಜಿಲ್ಲಾಧ್ಯಕ್ಷರಾದ ಬಿಬಿ ಕಾವಲು ಕಾಂತರಾಜು ರವರು ಪತ್ರಿಕಾ ಪ್ರಕಟಣೆ ತಿಳಿಸಿದರು,

ಇದೆ ಸಂದರ್ಭದಲ್ಲಿ ಮಾದಾರ ಮಾಹಾಸಭಾ ಮಂಡ್ಯ ಜಿಲ್ಲಾಧ್ಯಕ್ಷ ಬಿಬಿ ಕಾವಲು ಕಾಂತರಾಜು, ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ಕೆ. ಆರ್ ಕುಮಾರ್ ರಾಯಸಮುದ್ರ, ತಾಲ್ಲೂಕು ಬಾಬು ಜಗಜೀವನ್ ರಾಮ್ ಸಂಘಟನೆಗಳ ಒಕ್ಕೂಟದ ಹೆಚ್.ಎಮ್. ಪುಟ್ಟರಾಜ್, ನಿವೃತ್ತ ಶಿಕ್ಷಕ ಹೊಸಹೊಳಲು ಶಿವಣ್ಣ, ಗೋಪಿನಾಥ್ ರಾಯಸಮುದ್ರ, ಆರ್.ಕೆ. ಧನಂಜಯ, ಆರ್.ಟಿ. ಉಮೇಶ್, ಎನ್ ಆರ್. ಚನ್ನಿಗಯ್ಯ, ಸುರೇಶ್, ಜೆ.ಎನ್. ಧರ್ಮ, ಸ್ವಾಮಿ ಹೊಸಹೊಳಲು, ದೇವರಾಜ್ ಹೊಸಹೊಳಲು, ದೊಡ್ಡ ಕ್ಯಾತನಹಳ್ಳಿ ವಿಜಯಕುಮಾರ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು

## ಕೋರ್ಟಿನ ಆದೇಶ ಕ್ಯಾರೇ ಎನ್ನದ ರಮೇಶ್! ಖಡ್ಡಕ್ ಎಚ್ಚರಿಕೆ ಕೊಟ್ಟ ತಹಶೀಲ್ದಾರ್



**ಕೃಷ್ಣರಾಜಪೇಟೆ:** ತಾಲೋಕಿನ ಸಂತೇಬಾಚಹಳ್ಳಿ ಹೋಬಳಿಯ ಗೊರವಿ ಗ್ರಾಮದ ನಿವಾಸಿಗಳಾದ ಸಿದ್ದೇಗೌಡ ರವರ ಮಗನಾದ ರಮೇಶ್ ಹಾಗೂ ಪತ್ನಿ ಜ್ಯೋತಿ ರವರು ಸಂತೇಬಾಚಹಳ್ಳಿ ಹೋಬಳಿಯ ಗೊರವಿ ಗ್ರಾಮದ ಸರ್ವೆ ನಂ 122/* ರಲ್ಲಿನ 1.20.00 ಎ/ಗು ಮತ್ತು 2.00.00 ಎ/ಗು ಜಮೀನಿನ ಸಂಬಂಧಿಸಿದಂತೆ ಅನಾವಶ್ಯಕವಾಗಿ ರಮೇಶ್ ಎಂಬುವರು ಸಿದ್ದೇಗೌಡ ರವರಿಗೆ ತೊಂದರೆ ನೀಡುತ್ತಿರುವುದಾಗಿ ಕೃಷ್ಣರಾಜಪೇಟೆ ಪಟ್ಟಣದ ಟೌನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಈ ಪ್ರಕರಣ ಹಿರಿಯ ನಾಗರಿಕರ ಹಾಗೂ ಪೋಷಣೆ ಮತ್ತು ಸಂರಕ್ಷಣಾ ಹಾಗೂ ನಿರ್ವಾಹಣಾ ನ್ಯಾಯ ಮಂಡಳಿ ಹಾಗೂ ಉಪವಿಭಾಗಾಧಿಕಾರಿಯವರ ನ್ಯಾಯಾಲಯ ಪಾಂಡವಪುರ ಉಪವಿಭಾಗ ಪಾಂಡವಪುರ ತಾಲ್ಲೂಕಿನ ಪ್ರಕರಣ ದಾಖಲಾಗಿದ್ದು ವಿಚಾರಣೆ ನಡೆಸಿ ಅರ್ಜಿದಾರರಾದ ಸಿದ್ದೇಗೌಡ ರವರಿಗೆ ರಮೇಶ್ ರವರು ಪ್ರತಿ ತಿಂಗಳು ರೂ 5ಸಾವಿರ ಗಳನ್ನು ಜೀವನಾಂಶವನ್ನಾಗಿ ನೀಡುವುದರ ಜೊತೆಗೆ ಸೂಕ್ತ ರಕ್ಷಣೆ ನೀಡಿ ಯೋಗಕ್ಷೇಮ ನೋಡಿಕೊಳ್ಳಲು ಆದೇಶಿಸಿದ್ದು ಯಾವುದಕ್ಕೂ ತಲೆಕೆಡಿಸಿಕೊಳ್ಳದ ಹಿನ್ನೆಲೆಯಲ್ಲಿ ಸ್ಥಳಕ್ಕೆ ಆಗಮಿಸಿದ ತಾಲೋಕು ದಂಡಾಧಿಕಾರಿಗಳಾದ ಆಶೋಕ್ ಕುಮಾರ್ ಹಾಗೂ ಸರ್ಕಲ್ ಇನ್ಸೆಕ್ಟರ್ ಸುಮಾರಾಣಿ ರವರು ಕೋರ್ಟಿನ ಆದೇಶದಂತೆ ಸಿದ್ದೇಗೌಡ ಸ್ವಯಾರ್ಜಿತವಾಗಿ ಸರ್ವೆ ನಂ 122ರಲ್ಲಿ 3ಎಕರೆ 20ಗುಂಟೆ ಮತ್ತು ಒತ್ತುವರಿ ಒಟ್ಟು 6ಎಕರೆ 20ಗುಂಟೆ ವಿಸ್ತೀರ್ಣ ಜಮೀನನ್ನು ಹೊಂದಿದ್ದು ಇವರ ಮಗ ರಮೇಶ ಹಾಗೂ ಕುಟುಂಬಸ್ಥರು ತೊಂದರೆ ನೀಡುತ್ತಿರುವ ಹಿನ್ನೆಲೆಯಲ್ಲಿ ತಹಶೀಲ್ದಾರ್ ರವರು ದಾಖಲೆ ಪರಿಶೀಲನೆ ನಡೆಸಿ ಸಿದ್ದೇಗೌಡರಿಗೆ ಸೇರಿದ ಜಮೀನಿನಲ್ಲಿ ಯಾವುದೇ ರೀತಿಯ ಅನುಭೋಗ ಮಾಡಬಾರದೆಂದು ಖಡ್ಡಕ್ ಆದೇಶ ಹೊರಡಿಸಿದರು,

ಈ ಸಂದರ್ಭದಲ್ಲಿ ಮಾಂಬಳ್ಳಿ ಜಯರಾಮ್. ಚಲವಾದಿ ಮಹಾಸಭಾ ಮಂಡ್ಯ ಮತ್ತು ಹಾಸನ ಉಸ್ತುವಾರಿ. ಕುಮಾರ್. ಕರ್ನಾಟಕ ರಾಜ್ಯ ಮಾತಂಗಿ ಮಾದಿಗ ಸಮಾಜ ಪರಿವರ್ತನಾ ವೇದಿಕೆ. ಮಂಡ್ಯ ಜಿಲ್ಲಾ ಅಧ್ಯಕ್ಷರು. ಮತ್ತು ಚೆಲುವರಾಜ್. ಕರ್ನಾಟಕ ರಾಜ್ಯ ಮಾತಂಗಿ ಮಾದಿಗ ಸಮಾಜ ಪರಿವರ್ತನಾ ವೇದಿಕೆ. ತಾಲ್ಲೂಕು ಅಧ್ಯಕ್ಷ ರಂಗಸ್ವಾಮಿ. ಲಕ್ಷ್ಮಿಪುರ. ಡಿಎಸ್ಎಸ್ ಸದಸ್ಯರು. ರಾಜೇಶ್. ಕತರಘಟ್ಟ. ಡಿಎಸ್ಎಸ್ ಸದಸ್ಯರು. ಮತ್ತು. ನಾಗೇಶ್ ಹೊಸಹೊಳಲು ಗ್ರಾಮದ ಮುಖಂಡರು. ಶಿವರಾಂ. ಮಂಜುನಾಥ್.ಗೊರವಿ ಕುಮಾರ ಸೇರಿದಂತೆ ಗ್ರಾಮಸ್ಥರು ನೆರೆದಿದ್ದರು.

## ಭೀಕರ ಅಪಘಾತ: ನವದಂಪತಿ ಸ್ಥಳದಲ್ಲೇ ಸಾವು



**ಹಾವೇರಿ:** ನಿಂತಿದ್ದ ಲಾರಿಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ನವದಂಪತಿ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಹಾವೇರಿ ಜಿಲ್ಲೆ ಶಿಗ್ಗಾಂವಿ ತಾಲೂಕಿನ ಕಡಹಳ್ಳಿ ಗ್ರಾಮದ ಬಳಿ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ನಡೆದಿದೆ. ಕಾರ್ತಿಕ್ ಹೂಗಾರ(34), ಐಶ್ವರ್ಯಾ(30) ಮೃತ ದುರ್ದೈವಿಗಳು. ಕಾರ್ತಿಕ್, ಐಶ್ವರ್ಯಾ 15 ದಿನಗಳಿಂದ ಅಷ್ಟೇ ಮದುವೆಯಾಗಿದ್ದು, ಹೊಸ ಸಂಸಾರ ಪ್ರಾರಂಭಿಸುವ ಮುನ್ನ ದೇವರ ದರ್ಶನಕ್ಕೆ ಹೋಗಿ ಒಳ್ಳೇದು ಮಾಡಪ್ಪ ಎಂದು ಬೇಡಿಕೊಂಡು ಊರಿಗೆ ವಾಪಸ್ ಆಗುತ್ತಿದ್ದರು. ಆದ್ರೆ, ವಿಧಿ ಅರ್ಧ ದಾರಿಯಲ್ಲೇ ನವದಂಪತಿಯನ್ನು ಬಲಿ ಪಡದುಕೊಂಡಿದೆ.

ಹಾವೇರಿ ನಗರದ ನಿವಾಸಿಯಾಗಿರುವ ಕಾರ್ತಿಕ್ ಹೂಗಾರ ಹಾಗೂ ಐಶ್ವರ್ಯಾ 15 ದಿನದ ಹಿಂದೆ ಹೊಸ ಬಾಳಿಗೆ ಕಾಲಿಟ್ಟಿದ್ದು, ಹೊಸತರಲ್ಲಿ ದೇವರ ಆಶೀರ್ವಾದ ಇರಲಿ ಎಂದು ದೇವಸ್ಥಾನಕ್ಕೆ ಹೋಗಿದ್ದರು. ಆದ್ರೆ, ದೇವರ ದರ್ಶನಕ್ಕೆ ಹೋಗಿ ವಾಪಸ್ ಬರುತ್ತಿದ್ದ ವೇಳೆ ಈ ದುರ್ಘಟನೆ ನಡೆದಿದೆ. ಮದುವೆಯಾಗಿ ಕೇವಲ 15 ದಿನಗಳು ಆಗಿತ್ತು ಅಷ್ಟೇ. ವಿಷಯ ತಿಳಿಯುತ್ತಿದ್ದಂತೆ ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ಸ್ಥಳೀಯರು ಕಾರ್ಯಚರಣೆ ನಡೆಸಿ ಕಾರಿನಿಂದ ಮೃತದೇಹ ಹೊರಕ್ಕೆ ತೆಗೆದಿದ್ದಾರೆ.

ಜೋಡಿ ಕೆಎ – 63 ಎಂ – 0522 ವ್ಯಾಗನಾರ್ ಕಾರಿನಲ್ಲಿ ಹುಬ್ಬಳ್ಳಿ ಕಡೆಯಿಂದ ಶಿಗ್ಗಾಂವಿ ಕಡೆಗೆ ತೆರಳುತ್ತಿದ್ದು, ಈ ವೇಳೆ ಕಾರು ವೇಗವಾಗಿ ಹೋಗಿ ರಾಷ್ಟ್ರೀಯ ಹೆದ್ದಾರಿಯಲ್ಲಿ ನಿಂತಿದ್ದ ಲಾರಿಯ ಹಿಂಬದಿಗೆ ಡಿಕ್ಕಿ ಹೊಡೆದಿದೆ. ಪರಿಣಾಮ ದಂಪತಿ ಸ್ಥಳದಲ್ಲೇ ಸಾವನ್ನಪ್ಪಿದ್ದು, ಇನ್ನು ಡಿಕ್ಕಿ ಹೊಡೆದ ರಭಸಕ್ಕೆ ಕಾರು ಸಂಪೂರ್ಣವಾಗಿ ನಜ್ಜುಗುಜ್ಜಾಗಿದೆ.

ಕಾರಿನಲ್ಲಿದ್ದ ಇನ್ನಿಬ್ಬರು ಪ್ರಯಾಣಿಕರಿಗೆ ಗಂಭೀರ ಗಾಯಗಳಾಗಿದ್ದು, ಅವರನ್ನು ತಕ್ಷಣವೇ ಕಿಮ್ಸ್ ಆಸ್ಪತ್ರೆ ಹುಬ್ಬಳ್ಳಿಗೆ ರವಾನೆ ಮಾಡಲಾಗಿದೆ. ಗಾಯಾಳುಗಳ ಸ್ಥಿತಿ ಗಂಭೀರವಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ.

## ಶಾಲಾ ಪ್ರಾಂಶುಪಾಲರಿಂದ ವಿದ್ಯಾರ್ಥಿನಿಗೆ ಲೈಂಗಿಕ ದೌರ್ಜನ್ಯ



**ಬೆಂಗಳೂರುಗ್ರಾಮಾಂತರ:**ಶಾಲಾ ಪ್ರಾಂಶುಪಾಲ ರಿಂದಲೇ ವಿದ್ಯಾರ್ಥಿನಿ ಮೇಲೆ ಲೈಂಗಿಕ ದೌರ್ಜನ್ಯ..!.

ದೇವನಹಳ್ಳಿ ಬಳಿ ಇರುವ ಎಸ್ ಎಲ್ ಎಸ್ ಶಾಲೆಯಲ್ಲಿ ಲೈಂಗಿಕ ದೌರ್ಜನ್ಯ.ಶಾಲಾ ಮುಖ್ಯಸ್ಥ ಧನಂಜಯ್ ವಿರುದ್ಧ ಪೋಕ್ಸೋ ಪ್ರಕರಣ ದಾಖಲಿಸಿ ಬಂಧನ. ಎಂಟನೇ ತರಗತಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ.

ಬೆಂಗಳೂರಿನಿಂದ ಬಂದು ವಿದ್ಯಾಭ್ಯಾಸ ಮಾಡಲು ಹಾಸ್ಟೆಲ್ ನಲ್ಲಿ ಉಳಿದಿದ್ದ ಬಾಲಕಿ. ಹಾಸ್ಟೆಲ್ ರೂಪದಲ್ಲಿರುವ ರೂಮ್ ನಲ್ಲಿ ಕೃತ್ಯ ಎಸಗಿರುವ ಕಾಮುಕ..

ಲೈಂಗಿಕ ದೌರ್ಜನ್ಯ ನಡೆಸಿ ಪ್ರಕರಣ ಆಚೆ ಬರದಂತೆ ವಿದ್ಯಾರ್ಥಿನಿ ಮೇಲೆ ಒತ್ತಡ. ವಿದ್ಯಾರ್ಥಿನಿ ಮನೆಗೆ ಕರೆ ಮಾಡಲು ಸಹ ಫೋನ್ ಕೊಡದೆ ಸತಾಯಿಸಿದ್ದ ಕಾಮುಕ.

ಬೇರೆ ಪೋನಿನಿಂದ ಮನೆಯವರಿಗೆ ಕರೆ ಮಾಡಿ ಕಿರುಕುಳ ಬಗ್ಗೆ ಸಂತ್ರಸ್ಥೆ ಮಾಹಿತಿ.

ಮಾಹಿತಿ ತಿಳಿದ ಕೂಡಲೇ ಪೋಷಕರಿಂದ ದೇವನಹಳ್ಳಿ ಠಾಣೆಯಲ್ಲಿ ದೂರು ದಾಖಲು. ತನಿಖೆ ನಡೆಸಿ ಆರೋಪಿಯನ್ನ ಜೈಲಿಗಟ್ಟಿರುವ ದೇವನಹಳ್ಳಿ ಪೊಲೀಸರು.

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ಬಳಿ ಇರುವ ಎಸ್ ಎಲ್ ಎಸ್ ಶಾಲೆಯ ವಿದ್ಯಾರ್ಥಿನಿಯರ ಹಾಸ್ಟೆಲ್ ನಲ್ಲಿ ಘಟನೆ.

## ವಿವಿಧ ಬಗೆಯ ಕ್ಯಾನ್ಸರ್ ತಡೆಗಟ್ಟುವ ವ್ಯಾಕ್ಸಿನೇಷನ್(ಎಚ್.ಪಿ.ವಿ) ನೀಡಲು ಆರಂಭ



**ಪೀಣ್ಯ ದಾಸರಹಳ್ಳಿ** :ದೇಶದಲ್ಲಿ ಪ್ರತಿವರ್ಷ 80 ಸಾವಿರದಿಂದ ಒಂದು ಲಕ್ಷದವರೆಗೆ ಗರ್ಭಕೋಶದ ಕ್ಯಾನ್ಸರ್ ವರದಿಯಾಗುತ್ತಿದೆ. ಅದರಲ್ಲಿ 40 ಸಾವಿರ ಮಹಿಳೆಯರು ಕ್ಯಾನ್ಸರ್ ನಿಂದ ಸಾವನ್ನಪ್ಪುತ್ತಿದ್ದಾರೆ' ಎಂದು ಸಂಸದ ಡಾ. ಸಿ.ಎನ್. ಮಂಜುನಾಥ್ ತಿಳಿಸಿದರು.

ಚಿಕ್ಕಬಾಣಾವರದ ಆರ್. ಆರ್. ಕಾಲೇಜಿನಲ್ಲಿ ಆಯೋಜಿಸಲಾದ ಉಚಿತ ಆರೋಗ್ಯ ತಪಾಸಣಾ ಶಿಬಿರ ಮತ್ತು ರಕ್ತದಾನ ಶಿಬಿರ ಉದ್ಘಾಟಿಸಿ ಮಾತನಾಡಿದರು.
ಪ್ರಧಾನಿ ನರೇಂದ್ರ ಮೋದಿ ಮತ್ತು ನಡ್ಡಾ ಅವರು ಕ್ಯಾನ್ಸರ್ ತಡೆಗಟ್ಟುವ ಮತ್ತು ಮುನ್ನೆಚ್ಚರಿಕೆಗಾಗಿ12 ರಿಂದ 15 ವರ್ಷದೊಳಗಿನ ಹೆಣ್ಣು ಮಕ್ಕಳಿಗೆ (ಎಚ್.ಪಿ.ವಿ) ವಿವಿಧ ಬಗೆಯ ಕ್ಯಾನ್ಸರ್ ತಡೆಗಟ್ಟುವಿಕೆಯ ವ್ಯಾಕ್ಸಿನೇಷನ್ ಅನ್ನು ಉಚಿತವಾಗಿ ನೀಡಲು ಆರಂಭಿಸಿದ್ದಾರೆ' ಎಂದು ಮಾಹಿತಿ ನೀಡಿದರು.

ಇತ್ತೀಚಿಗೆ ಚಿಕ್ಕ ಯುವಕರಲ್ಲಿಯೂ ಕೂಡ ಹೃದಯಾಘಾತ, ಬ್ರೈನ್ ಸ್ಟ್ರೋಕ್ ಆಗುತ್ತಿವೆ. ನೋಡಲು ಸುಂದರವಾಗಿ ಕಂಡರೂ ಕೂಡ ಒಳಗೆ ವಿವಿಧ ಬಗೆಯ ಕಾಯಿಲೆಗಳು ಇರುತ್ತವೆ. ಅದಕ್ಕಾಗಿ ಎಲ್ಲಾ ಕಡೆ ಇಂತಹ ಆರೋಗ್ಯ ಶಿಬಿರಗಳಿಂದ ಆರೋಗ್ಯ ಪರೀಕ್ಷಿಸಿಕೊಳ್ಳುವುದು ಉತ್ತಮ' ಎಂದು ಸಲಹೆ ನೀಡಿದರು.
ಯುವಕರಲ್ಲಿ ಉತ್ತಮ ಜೀವನ ಶೈಲಿ ಇಲ್ಲದೆ ಸಕ್ಕರೆ ಕಾಯಿಲೆ, ರಕ್ತದೊತ್ತಡ, ಮಾನಸಿಕ ಕಾಯಿಲೆಗಳು ಹೆಚ್ಚಾಗುತ್ತಿದೆ. ಕೆಲವು ಕೆಟ್ಟ ಚಟಗಳಿಗೆ ಬಲಿಯಾಗದೆ,ಉತ್ತಮ ಜೀವನಶೈಲಿ, ಉತ್ತಮ ಆಹಾರ ಪದ್ಧತಿ ರೂಢಿಸಿಕೊಳ್ಳಬೇಕು' ಎಂದರು.

ಉತ್ತಮ ನಿದ್ರೆ, ವ್ಯಾಯಾಮ, ಯೋಗ, ವಾಕ್, ಉತ್ತಮ ಆಹಾರ ಪದ್ಧತಿ ಡಯಟ್, ಉತ್ತಮ ಜನರ ಸಹವಾಸ, ಯಾರನ್ನು ಅವ ಹೇಳನ ಮಾಡದಂತೆ ನಿಮ್ಮ ಕೆಲಸಗಳಲ್ಲಿ ನೀವು ಬದ್ಧರಾಗಬೇಕು. ಆದಷ್ಟು ದೇಹದ ತೂಕ, ಕೆಟ್ಟ ಕೊಬ್ಬಿನಾಂಶ, ಸಕ್ಕರೆ ಕಾಯಿಲೆ ಕಡಿಮೆ ಮಾಡಿಕೊಳ್ಳಬೇಕು' ಎಂದು ತಿಳಿಸಿದರು.
ಶಾಸಕ ಎಸ್. ಮುನಿರಾಜು ಮಾತನಾಡಿ,' ಜೀವನದಲ್ಲಿ ದೇಶಕ್ಕೆ ಮತ್ತು ಸಮಾಜಕ್ಕೆ ಏನಾದರೂ ಕೊಡುಗೆ ನೀಡಬೇಕು ಎಂಬ ಗುರಿಯನ್ನು ಇಟ್ಟು ಚೆನ್ನಾಗಿ ಓದಿ ಉತ್ತಮ ಸಮಾಜ ಕಟ್ಟುವ ಪ್ರಜೆಗಳಾಗಬೇಕು' ಎಂದರು.

ನಾರಾಯಣ ಹೃದಯಾಲಯದ ಡಾ. ದೇವಿಪ್ರಸಾದ್ ಶೆಟ್ಟಿ, ಪ್ರಕ್ರಿಯ ಆಸ್ಪತ್ರೆಯ ಡಾ. ಸೋಮನಾಥ ಚಟರ್ಜಿ, ಶಾಸಕ ಎಸ್. ಮುನಿರಾಜು, ಆರ್ ಆರ್ ಕಾಲೇಜಿನ ಅಧ್ಯಕ್ಷ ರಾಜಾರೆಡ್ಡಿ, ಕಾರ್ಯದರ್ಶಿ ಕಿರಣ್ ರೆಡ್ಡಿ, ಟ್ರಸ್ಟಿ ವರುಣ್, ಲಯನ್ ಎಸ್. ಮನೋಜ್ ಕುಮಾರ್, ಲಯನ್ ಗೋವಿಂದರಾಜು ಪೈ, ಪ್ರಾಂಶುಪಾಲ ರಾಘವೇಂದ್ರ ಮುಂತಾದವರಿದ್ದರು

## ಇಕೊ ಗ್ರೀನ್ CETP ಘಟಕ ಮುಚ್ಚುವಿಕೆಗೆ ಸಂಬಂಧಿಸಿದಂತೆ ತುರ್ತು ಸರ್ಕಾರದ ಹಸ್ತಕ್ಷೇಪಕ್ಕೆ ಮನವಿ



**ಪೀಣ್ಯ:** ಕೈಗಾರಿಕಾ ಸಂಘ (ಪಿಐಎ) ವತಿಯಿಂದ,15 ಮಾರ್ಚ್ 2026 ರಿಂದ ಇಕೊ ಗ್ರೀನ್ ಸೊಲ್ಯೂಷನ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್ ತನ್ನ ಕಾಮನ್ ಎಫ್ಲುವೆಂಟ್ ಟ್ರೀಟ್ಮೆಂಟ್ ಪ್ಲಾಂಟ್ ಕಾರ್ಯಾಚರಣೆಯನ್ನು ಸ್ಥಗಿ–ತಗೊಳಿಸುವುದಾಗಿ ನೀಡಿರುವ ನೋಟೀಸ್ ಹಿನ್ನೆಲೆ, ಪೀಣ್ಯ ಕೈಗಾರಿಕಾ ಪ್ರದೇಶದ ಕೈಗಾರಿಕೆಗಳು ಎದು–ರಿಸುತ್ತಿರುವ ಗಂಭೀರ ಸಂಕಷ್ಟವನ್ನು ಕರ್ನಾಟಕ ಸರ್ಕಾರ ಮತ್ತು ಸಂಬಂಧಿತ ಅಧಿಕಾರಿಗಳ ಗಮನಕ್ಕೆ ತುರ್ತುವಾಗಿ ತರಲು ಇಚ್ಚಿಸುತ್ತೇವೆ' ಎಂದು ಪೀಣ್ಯ ಕೈಗಾರಿಕಾ ಸಂಘದ ಅಧ್ಯಕ್ಷ ಡಿ.ಪಿ. ದಾನಪ್ಪ ತಿಳಿಸಿದರು.

**ನೋಟೀಸ್ ಪ್ರಕಾರ:** ಕಾರ್ಯಾಚರಣಾ ಹಾಗೂ ಆಡಳಿತಾತ್ಮಕ ಅಡಚಣೆಗಳ ಕಾರಣದಿಂದ ಇನ್ನುಮುಂದೆ ವಾಣಿಜ್ಯ ಮಲೀನ ನೀರನ್ನು ಸ್ವೀಕರಿಸುವುದಿಲ್ಲ ಹಾಗೂ ಶುದ್ದೀಕರಿಸುವುದಿಲ್ಲ ಎಂದು ಇಕೊ ಗ್ರೀನ್ ಸದಸ್ಯ ಕೈಗಾ–ರಿಕೆಗಳಿಗೆ ತಿಳಿಸಿದೆ. ಈ ಘಟಕದ ಮುಚ್ಚುವಿಕೆಯಿಂದ ಇನ್ನುಮುಂದೆ ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಕಾರ್ಯನಿರ್ವ ಹಣೆಯಲ್ಲಿರುವ ಯಾವುದೇ CETP ಘಟಕವಿ ಲ್ಲದಂತಾಗಿದೆ.

ಪೀಣ್ಯ ಏಷ್ಯಾದ ಅತಿ ದೊಡ್ಡ ಕೈಗಾರಿಕಾ ಪ್ರದೇಶಗಳಲ್ಲಿ ಒಂದಾಗಿದ್ದು, ಸಾವಿರಾರು ಎಂಎಸ್–ಎಂಇಗಳು ಹಾಗೂ ದೊಡ್ಡ ಕೈಗಾ–ರಿಕೆಗಳನ್ನು ಒಳಗೊಂಡಿದೆ. ಇಕೊ ಗ್ರೀನ್ ಘಟಕದ ಆಕಸ್ಮಿಕ ಮುಚ್ಚುವಿಕೆಯಿಂದ ಕೈಗಾರಿಕೆಗಳು ಅತ್ಯಂತ ಸಂಕಷ್ಟಕರ ಪರಿಸ್ಥಿತಿಯನ್ನು ಎದುರಿಸುತ್ತಿವೆ.

**ಪ್ರಸ್ತುತ ಪರಿಸ್ಥಿತಿ ಹೀಗಿದೆ:** ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಪರ್ಯಾಯ CETP ಘಟಕ ಲಭ್ಯವಿಲ್ಲ.

ಶುದ್ದೀಕರಿಸಿದ ಮಲೀನ ನೀರನ್ನು ಬಿಡುಗಡೆ ಮಾಡಲು ಕೈಗಾ–ರಿಕೆಗಳಿಗೆ ಯಾವುದೇ ಅಧಿಕೃತ ವ್ಯವಸ್ಥೆಯಿಲ್ಲ.

ಕಾನೂನು ಹಾಗೂ ಪರಿಸರ ನಿಯಮಾವಳಿಗಳ ಕಾರಣದಿಂದ ಮಲಿನ ನೀರನ್ನು ಒಳಚರಂಡಿ ಅಥವಾ ರಾಜಕಾಲುವೆಗಳಿಗೆ ಬಿಡಲು ಸಾಧ್ಯವಿಲ್ಲ.

ಸಮರ್ಪಕ ಮಲೀನ ನೀರು ವಿಲೇವಾರಿ ವ್ಯವಸ್ಥೆಯಿಲ್ಲದ ಕಾರಣ ಉತ್ಪಾದನಾ ಚಟುವಟಿಕೆಗಳು ಗಂಭೀರವಾಗಿ ಪರಿಣಾಮ ಗೊಳಗಾಗುತ್ತವೆ' ಎಂದು ಪೀಣ್ಯ ಕೈಗಾ–ರಿಕಾ ಸಂಘದ ಅಧ್ಯಕ್ಷ ಡಿ.ಪಿ. ದಾನಪ್ಪ ತಿಳಿಸಿದರು.

ಈ ಪರಿಸ್ಥಿತಿ ಅತ್ಯಂತ ಗಂಭೀರ ವಾಗಿದ್ದು, ತಕ್ಷಣ ಕ್ರಮ ಕೈಗೊಳ್ಳದಿದ್ದಲ್ಲಿ ಸರ್ಫೇಸ್ ಟ್ರೀಟ್‌ಮೆಂಟ್ ಕೈಗಾರಿಕೆಗಳಿಗೆ ಮುಚ್ಚುವ ಭೀತಿ ಎದುರಾಗಿದೆ. ಇದರಿಂದ ಆರ್ಥಿಕ ನಷ್ಟ ಹಾಗೂ ಸಾವಿರಾರು ಕಾರ್ಮಿಕರು ಉದ್ಯೋಗ ಕಳೆದುಕೊಳ್ಳುವ ಪರಿಸ್ಥಿತಿ ಉಂಟಾಗುವ ಸಾಧ್ಯತೆ ಇದೆ' ಎಂದು ತಿಳಿಸಿದರು.

## ಕನ್ನಡಿಗರನ್ನು ಸುರಕ್ಷಿತವಾಗಿ ಕರೆತರಲಾಗುವುದು– ಸಿಎಂ ಸಿದ್ದರಾಮಯ್ಯ



**ಶಿವಮೊಗ್ಗ :** ರಾಜ್ಯ ಸರ್ಕಾರ ವಿದೇಶಾಂಗ ಸಚಿವಾಲಯದೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿದ್ದು, ಅರಬ್ ರಾಷ್ಟಗಳಲ್ಲಿ ಸಿಲುಕಿರುವ ಕನ್ನಡಿಗರಿಗೆ ತೊಂದರೆಯಾಗದಂತೆ ಕರೆತರಲು ಪ್ರಯತ್ನ ಮಾಡಲಾಗುತ್ತಿದೆ ಎಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಅವರು ಇಂದು ಶಿವಮೊಗ್ಗದ ವಿಮಾನ ನಿಲ್ದಾಣ ದಲ್ಲಿ ಮಾಧ್ಯಮದ ವರೊಂದಿಗೆ ಮಾತ ನಾಡಿದರು.

ಅರಬ್ ದೇಶಗಳಲ್ಲಿ ಸಿಲುಕಿರುವ ಬಳ್ಳಾರಿಯ 30 ಜನರನ್ನು ವಾಪಸ್ಸು ಕರೆತರಲಾಗುವುದು ಎಂದು ಹೇಳಿದರಲ್ಲದೆ ದುಬೈ ನಲ್ಲಿರುವ ಭಾರತೀಯರು ಸುರಕ್ಷಿತ ವಾಗಿದ್ದಾರೆ ಎಂದರು.

**ಕನ್ನಡಿಗರನ್ನು ಸುರಕ್ಷಿತವಾಗಿ ವಾಪಸ್ಸು ಕರೆತರಲಾಗುವುದು:**ಅರಬ್ ದೇಶಗಳಲ್ಲಿ ವಾಸಿಸುತ್ತಿರುವ ಕನ್ನಡಿಗರ ಸುರಕ್ಷತೆಯ ಬಗ್ಗೆ ಮುಖ್ಯ ಕಾರ್ಯದರ್ಶಿ, ಸ್ಥಾನಿಕ ಆಯುಕ್ತರೊಂದಿಗೆ ಚರ್ಚಿಸಲಾಗಿದೆ. ದುಬೈ ವಿಮಾನ ನಿಲ್ದಾಣ ಬಂದ್ ಮಾಡಲಾಗಿದ್ದು, ಅದನ್ನು ತೆರೆದ ಮೇಲೆ ಅವರನ್ನು ಭಾರತಕ್ಕೆ ಸುರಕ್ಷಿತವಾಗಿ ಕರೆ ತರಲು ವ್ಯವಸ್ಥೆ ಮಾಡಲಾಗುವುದು. ವಿಧಾನ ಪರಿಷತ್ ಸದಸ್ಯ ಭೋಜೇಗೌಡರು ದುಬೈದಲ್ಲಿದ್ದು, ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿದ್ದೇನೆ ಹೋಟೆಲಿನಲ್ಲಿ ಸುರಕ್ಷಿತವಾಗಿ ರುವುದಾಗಿ ಹೇಳಿದರು ಎಂದರು.

ಅಮೆರಿಕಾದ ತದ್ವಿರುದ್ಧ ನಿಲುವನ್ನು ಖಂಡಿಸುತ್ತೇನೆ

**ಅಮೆರಿಕಾ ಇರಾನ್ ಮೇಲೆ ಮಾಡಿರುವ ದಾಳಿ ಅನಗತ್ಯ ವಾದುದು.** ಒಂದೆಡೆ ಶಾಂತಿ ಮಾತ್ರ ಪಠಿಸುವ ಅಮೆರಿಕಾ ಮತ್ತೊಂದೆಡೆ ಯುದ್ಧ ಮಾಡುತ್ತದೆ. ಅಮೆರಿಕಾ ತದ್ವಿರುದ್ಧವಾದ ನಿಲುವು ಹೊಂದಿದ್ದು, ಇದನ್ನು ಖಂಡಿಸುವುದಾಗಿ ತಿಳಿಸಿದರು.

ಇರಾನ್ ಅಧ್ಯಕ್ಷ ಆಯಾತೊಲ್ಲಾ ಖಮೇನಿ ಹತ್ಯೆಯಾಗಿದ್ದು, ಅವರ ಆತ್ಮಕ್ಕೆ ಚಿರಶಾಂತಿ ದೊರೆಯಲಿ ಎಂದು ಪ್ರಾರ್ಥಿಸುವುದಾಗಿ ಹೇಳಿದರು.

**ಸದ್ಯಕ್ಕೆ ವಿದ್ಯುತ್ ದರ ಏರಿಕೆ ಇಲ್ಲ** :ಏಪ್ರಿಲ್ ನಲ್ಲಿ ವಿದ್ಯುತ್ ದರ ಏರಿಕೆಯ ಪ್ರಸ್ತಾಪದ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿಗಳು ಸದ್ಯಕ್ಕೆ ಸರ್ಕಾರದ ಮುಂದೆ ಆ ಪ್ರಸ್ತಾಪವಿಲ್ಲ ಎಂದರು.





## ಕಾಡಾನೆ ದಾಳಿಗೆ ಪಿಯು ವಿದ್ಯಾರ್ಥಿನಿ ಬಲಿ, ಭುಗಿಲೆದ್ದ ಆಕ್ರೋಶ



**ಕೊಡಗು:** ಪಿಯುಸಿ ಪರೀಕ್ಷೆ ಬರೆದು ರಜೆ ಕಳೆಯುವ ಕನಸಿನಲ್ಲಿ ಇದ್ದ ವಿದ್ಯಾರ್ಥಿನಿ ಕಾಡಾನೆ ದಾಳಿಗೆ ದಾರುಣವಾಗಿ ಬಲಿಯಾಗಿರುವ ಘಟನೆ ಮಡಿಕೇರಿ ತಾಲೂಕಿನ ಗುಡ್ಡಗಾಡು ಗ್ರಾಮದ ಬೆಟ್ಟತ್ತೂ–ರಿನಲ್ಲಿ ನಡೆದಿದೆ.

ಸಂಜೆ ತಂದೆ–ತಾಯಿಯೊಂದಿಗೆ ಬೈಕ್‌ನಲ್ಲಿ ಮನೆಗೆ ಬಂದ ಪೂಜ್ಯ ಬೈಕ್‌ನಿಂದ ಇಳಿದ ಕ್ಷಣದಲ್ಲೇ ಕತ್ತಲಿನಲ್ಲಿ ಹಿಂಬದಿಯಿಂದ ದಾಳಿ ನಡೆಸಿದ ಒಂಟಿ ಕಾಡಾನೆ ಆಕೆಯನ್ನು ತುಳಿದು ಸ್ಥಳದಲ್ಲೇ ಸಾವಿಗೀಡಾಗುವಂತೆ ಮಾಡಿದೆ. ಮಗಳ ಕಿರುಚಾಟ ಕೇಳಿ ತಾಯಿ ದೇವಕಿ ಆಕ್ರಂದನ ವ್ಯಕ್ತಪಡಿಸಿದರೂ ಪ್ರಯೋಜನವಾಗಲಿಲ್ಲ. ಬೈಕ್ ನಿಲ್ಲಿಸಲು ಸ್ವಲ್ಪ ದೂರ ತೆರಳಿದ್ದ ತಂದೆ ಚಂಗಪ್ಪ ಓಡಿ ಬರುವಷ್ಟರಲ್ಲಿ ಅನಾಹುತ ಸಂಭವಿಸಿತ್ತು.

ಈ ಭಾಗದಲ್ಲಿ ಒಂಟಿ ಕಾಡಾನೆ ಸಂಚಾರ ಹೆಚ್ಚಾಗಿದ್ದು, ಆನೆ–ಮಾನವ ಸಂಘರ್ಷ ತೀವ್ರಗೊಂಡಿದೆ. ಸ್ಥಳಕ್ಕೆ ಭೇಟಿ ನೀಡಿದ ಅರಣ್ಯಾಧಿಕಾರಿಗಳು ಕಾಡಾನೆಯನ್ನು ಸೆರೆ ಹಿಡಿಯಲು ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ. ಮೃತಳ ಕುಟುಂಬಕ್ಕೆ ಸರ್ಕಾರದಿಂದ ಇಪ್ಪತ್ತು ಲಕ್ಷ ರೂಪಾಯಿ ಪರಿಹಾರ ನೀಡಲಾಗುವುದು ಎಂದು ತಿಳಿಸಲಾಗಿದೆ.
ಘಟನೆಯಿಂದ ಗ್ರಾಮದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದ್ದು, ಸ್ಥಳೀಯರು ತಕ್ಷಣ ಶಾಶ್ವತ ಪರಿಹಾರಕ್ಕೆ ಆಗ್ರಹಿಸಿದ್ದಾರೆ. ರಾತ್ರಿ ಸಮಯದಲ್ಲಿ ಕಾಡಾನೆಗಳ ಸಂಚಾರ ಹೆಚ್ಚುತ್ತಿರುವುದರಿಂದ ಜನರು ಭೀತಿಯಲ್ಲಿ ಬದುಕುವಂತಾಗಿದೆ. ಕಾಡುಪ್ರಾಣಿಗಳ ನಿಯಂತ್ರಣಕ್ಕೆ ಸಮಗ್ರ ಹಾಗೂ ವೈಜ್ಞಾನಿಕ ಕ್ರಮಗಳನ್ನು ಕೈಗೊಳ್ಳಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಇಂತಹ ಘಟನೆಗಳು ಮರುಕಳಿಸದಂತೆ ಕಾಡು–ನಾಡು ಗಡಿ ಪ್ರದೇಶಗಳಲ್ಲಿ ಕಟ್ಟುನಿಟ್ಟಿನ ಭದ್ರತಾ ವ್ಯವಸ್ಥೆ ಜಾರಿಗೊಳಿಸಬೇಕು ಎಂಬ ಬೇಡಿಕೆ ಕೇಳಿಬಂದಿದೆ. ವಿದ್ಯಾರ್ಥಿನಿಯ ಅಕಾಲಿಕ ಸಾವಿನಿಂದ ಗ್ರಾಮದಲ್ಲಿ ಶೋಕ ವಾತಾವರಣ ಆವರಿಸಿದೆ.

Printed by: R Ramesh, Published by Abhishek D R On Behalf of Abhishek D R, Printed at Maruthi Enterprises. No.1159, Near vFloor Mill, D Cross, Doddaballapura Town, Bengaluru rural, Karnataka - 561203, Published at No. 3769/1, Rajarathna Nivasa, KSRTC Layout, Near Ambedkar Stadium, Rayan Nagara, Nelamangala. Editor Abhishek D R.

# ನಾಲ್ಕುದಶಕಗಳ ಬಳಿಕ ನೆಲಮಂಗಲದಲ್ಲಿ ಇತಿಹಾಸ ಸೃಷ್ಟಿಸಿದ್ದ ಸಂತಸವಾಗಿದೆ : ಶ್ರೀಉಜ್ಜಯಿನಿ ಜಗದ್ಗುರು





**ನೆಲಮಂಗಲ :** ತಾಲೂಕಿನ ಧಾರ್ಮಿಕ ಇತಿಹಾಸದಲ್ಲಿ ಕಳೆದ ನಾಲ್ಕುದಶಕಗಳ ನಂತರ ನಡೆದ ಅಡ್ಡಪಲ್ಲಕ್ಕಿ ಉತ್ಸವ ಮತ್ತೊಮ್ಮೆ ಇತಿಹಾಸವನ್ನು ನಿರ್ಮಾಣಮಾಡಿರುವುದು ಸಂತವನ್ನು ಉಂಟುಮಾಡಿದೆ ಅದ್ದೂರಿ ಅಡ್ಡಪಲ್ಲಕ್ಕಿ ಉತ್ಸವ ಪಂಚಪೀಠಾಧೀಶ್ವರರ ಮೇಲಿನ ಭಕ್ತಿಯನ್ನು ಬಿಂಬಿಸುತ್ತದೆ ಎಂದು ಶ್ರೀಮದ್‌ಉ–ಜ್ಜಯಿನಿ ಸದ್ಧರ್ಮಸಿಂಹಾಸನಾಧೀಶ್ವರ ಶ್ರೀಶ್ರೀ1008 ಜಗದ್ಗುರು ಸಿದ್ದಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು ತಿಳಿಸಿದರು.

ನಗರದ ಅಡೇಪೇಟೆಯಲ್ಲಿರುವ ಶ್ರೀಬಸವೇಶ್ವರ ಯುವಕ ಸಂಘ ಹಾಗೂ ವೀರಶೈವ ಲಿಂಗಾಯತ ಸಂಘಟನೆಗಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಆದಿಗುರು ಶ್ರೀರೇಣುಕಾಚಾರ್ಯರ ಜಯಂತೋತ್ಸ ಹಾಗೂ ಜಗದ್ಗುರು ಪಂಚಾಚಾರ್ಯರ ಯುಗಮಾನೋತ್ಸವ ಕಾರ್ಯಕ್ರಮದಲ್ಲಿ ಅಡ್ಡಪಲ್ಲಕ್ಕಿ ಸೇವೆಯನ್ನು ಸ್ವೀಕರಿಸಿ ಮಾತನಾಡಿದರು.

ಧರ್ಮ ಚಿಂತನೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಸಮಾಜಮುಖಿ ಚಿಂತನೆ ಸಂಘಟನೆ ಒಂದು ಕಡೆಯಾದರೆ ನಿಜವಾದ ಅರ್ಥದಲ್ಲಿ ಧರ್ಮ ಮನಸ್ಸಿಗೆ ಔಷದಿ, ಪ್ರವಚನಗಳಿಂದ ಮನಸ್ಸು ಅರಳುತ್ತದೆ, ಮೆಲಣಗವಿ ಶ್ರೀಗಳ ಪ್ರವರ್ಚನ ಮನಸ್ಸಿಗೆ ಖುಷಿಯನ್ನು ನೀಡುತ್ತದೆ, ಪ್ರತಿಯೊಂದು ಕರ್ಯಕ್ರಮದಲ್ಲೂ ಒಂದಲ್ಲ ಒಂದು ರೀತಿಯಲ್ಲಿ ವಿಶೇಷತೆಇರುತ್ತದೆ, ತಾಲೂಕಿನ ಜನತೆ ಶ್ರೀಪೀಠಕ್ಕೆ ಪರಮೋನ್ನತವಾದ ಗೌರವವನ್ನು ನೀಡುತ್ತಿರುವುದು ಮನಸ್ಸಿಗೆ ಸಂತಸವನ್ನುಂಟುಮಾಡಿದೆ, ಆದ್ಯರ ಪಲ್ಲಕ್ಕಿ ಎಂಬುದು ಆಡುಭಾಷೆಯಿಂದಾಗಿ ಅಡ್ಡಪಲ್ಲಕ್ಕಿಯಾಗಿ ಪರಿವರ್ತನೆಯಾಗಿದೆ. ಸನಾತನ ಪಂಚ ಪೀಠ್ಠ ರಾಷ್ಟ್ರೀಯ ಗುರುಪೀಠಗಳು ರಾಜಗುರುಗಳಾಗಿ ಸನಾತನ ಕಾಲದಿಂದಲೂ ಸಮಾಜವನ್ನು ಮುನ್ನಡೆಸಿ ಕೊಮಡು ಹೋಗುತ್ತಿರುವುದು ಹೆಮ್ಮೆಯ ಸಂಗತಿ.

ಉಜ್ಜಯಿನಿ ಸದ್ಧರ್ಮ ಪೀಠ ಎಲ್ಲಾ ಧರ್ಮ ಜಾತಿ ಜನಾಂಗದವರನ್ನು ಒಳಗೊಂಡಪೀಠವಾಗಿದೆ, ಇಷ್ಟಲಿಂಗಕ್ಕೆ ಇಷ್ಟಾರ್ಥಗಳನ್ನು ಈಡೇರಿಇಸುವ ಶಕ್ತಿಯಿದೆ. ಆದ್ದರಿಂದ ಪ್ರತಿಯೊಬ್ಬರು ತಪ್ಪದೆ ಲಿಂಗಧೀಕ್ಷೆಯನ್ನು ಪಡೆದುಕೊಂಡು ಪ್ರತಿನಿತ್ಯ ಪೂಜೆಯನ್ನು ಸಲ್ಲಿಸಬೇಕು, ಜಗತ್ತಿನಲ್ಲಿ ಸರ್ವರನ್ನು ಸಮಾನವಾಗಿ ಕಾಣುವ ಯಾವುದಾದರೂ ಧರ್ಮ ವಿದ್ದರೆ ಅದು ವೀರಶೈವ ಲಿಂಗಾಯತ ಧರ್ಮ ಎಂದು ತಿಳಿಸಿದರು.

ಶಿವಗಂಗೆ ಮೇಲಣಗವಿಂಠದ ಡಾ.ಶ್ರೀ. ಮಲಯಶಾ ಂತಮುನಿದೇಶೀಕೇಂದ್ರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ ನೆಲಮಂಗಲದಲ್ಲಿ ಹಮ್ಮಿಕೊಮಡಿದ್ದ ಅಡ್ಡಪಲ್ಲಕ್ಕಿ ಉತ್ಸವ ಮತ್ತೊಮ್ಮೆ ನಲವತ್ತು ವರ್ಷಗಳ ಬಳಿಕ ಇತಿಹಾಸವನ್ನು ಸೃಷ್ಟಿಸಿದಂತಾಗಿದೆ, ದೇಹವನ್ನು ದಂಡಿಸಿ ಮಾಡುವ ಸೇವೆಯೆ ನಿಜವಾದ ಸೇವೆ, ದೇವರ ನಮಗೆ ದೇಹವನ್ನು ನೀಡಿರುವುದರಿಂದ ನಾವುಗಳು ದೇಹವನ್ನು ದಂಡಿಸಿ ದೇವರ ದರ್ಶನವನ್ನು ಮಾಡಿದಾಗ ಮಾತ್ರ ಜೀವನ ಸಾರ್ಥಕತೆಯನ್ನು ಹೊಂದುವುದರೊಂದಿಗೆ ಮುಕ್ತಿಯನ್ನು ನೀಡುತ್ತದೆ ಎಂದು ತಿಳಿಸಿದರು.

ಪುರಪ್ರವೇಶ : ನಗರದ ಕವಾಡಿಮಠದ ಆವರಣಕ್ಕೆ ಆಗಮಿಸಿದ ಜಗದುರು ಉಜ್ಜಯಿನಿ ಶ್ರೀಗಳನ್ನು ವೀರಶೈವ ಮಹಿಳಾ ಸಮಾಜದಿಂದ ಪೂರ್ಣಕುಂಭದ ಮೂಲಕ ಸಂಭ್ರಮ ಸಡಗರದಿಂದ ಬರಮಾಡಿಕೊಂಡ ಭಕ್ತಸಮೂಹ ಅದ್ದೂರಿಯಾಗಿ ಅಡಪಲ್ಲಕ್ಕಿಯನ್ನು ನೆರವೇರಿಸಿದರು. ತಮಟೆವಾಧ್ಯ ವೀರಗಾಸೆ ತಂಡದವರಿಂದ ವಿಶೇಷವಾದ ನೃತ್ಯಹಾಗೂ ನಂದಿಕೋಲು ಕುಣಿತ, ಮಹಿಳಾ ಸಮಾಜದಿಂದ ಹಮ್ಮಿಕೊಂಡಿದ್ದ ಕೋಲಾಟದ ನೃತ್ಯಗಳ ಮೆರವಣಿಗೆಯುದ್ದಕ್ಕೂ ಭಕ್ತರಗಮನ ಸೆಳೆಯಿತು.

ಸಂದರ್ಭದಲ್ಲಿ ಮಾಗಡಿ ಜಡೇದೇವರಮಠದ ಶ್ರೀಇಮ್ಮಡಿಬಸವರಾಜ ಸ್ವಾಮೀಜಿ, ತಮ್ಮಡಿಹಳ್ಳಿಯ ಶ್ರೀಸಿದ್ದಲಿಂಗಸ್ವಾಮೀಜಿ , ಪಂಚಾವಾರ್ಯ ಯುಗಮಾನೋತ್ಸವ ಸಮಿತಿ ಅರ್ಧಯಕ್ಷ ಎನ್.ಎಸ್.ನಟರಾಜು, ಕಮಾಡಿಂಠ ದತ್ತಿಸಮಿತಿ ಅಧ್ಯಕ್ಷ ಎನ್.ಆರ್.ಜಗದೀಶ್,ಶ್ರೀರುದ್ರೇಶ್ವರ ಸೊಸೈಟಿ ಅಧ್ಯಕ್ಷ ಎನ್.ಬಿ,ದಯಾಶಂಕರ್, ಟೌನ್ ಸೊಸೈಟಿ ಅಧ್ಯಕ್ಷ ಚನ್ನಬಸವರಾಜು, ಬಸವೇಶ್ವರ ಯುವಕಸಮಿತಿ ಅಧ್ಯಕ್ಷ ಎನ್.ಎಸ್.ಗಣೇಶ್, ಸದಸ್ಯರುಗಳಾದ ಎನ್.ಎಸ್.ರಾಜು, ಎನ್.ಜಿ.ರುದ್ರಮೂರ್ತಿ, ಕಾರ್ತಿಕ್, ಚಂದ್ರಶೇಖರ್, ಕೆ.ಸಿ.ಅಣ್ಣಪ್ಪ, ಎನ್.ಜಿ.ಶಿವಶಂಕರ್ ,ಎನ್.ಜೆ.ದೀಪಕ್ ರಾಜಮ್ಮಪ್ರಕಾಶ್.ವೇದಾವತಿ ಮಂಜುನಾಥ್, ಮಂಜುಳಾಸುರೇಶ್. ಎನ್.ರಾಜಶೇಖರ್.ಕೊಟ್ರೇಶ್.ಆರ್. ಮತ್ತಿತರರಿದ್ದರು.

ನೆಲಮಂಗಲ ಅಡೇಪೇಟೆ ಶ್ರೀಬಸವೇಶ್ವರಯುವಕ ಸಮಿತಿವತಿಯಿಂದ ಉಜ್ಜಯಿನಿ ಶ್ರೀಶ್ರೀ1008 ಜಗದ್ಗುರು ಸಿದ್ದಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರ ಅಡ್ಡಪಲ್ಲಕ್ಕಿ ಉತ್ಸವನ್ನು ಅದ್ದೂರಿಯಾಗಿ ನಡೆಸಲಾಯಿತು.



**ನೆಲಮಂಗಲ ಅಡೇಪೇಟೆ ಶ್ರೀಬಸವೇಶ್ವ ರಯುವಕ ಸಮಿತಿವತಿಯಿಂದ ಹಮ್ಮಿಕೊಂಡಿದ್ದ ಉಜ್ಜಯಿನಿ ಶ್ರೀಶ್ರೀ1008 ಜಗದ್ಗುರು ಸಿದ್ದಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು ಅಡ್ಡಪಲ್ಲಕ್ಕಿ ಉತ್ಸವದ ಬಳಿಕ ಆಶೀರ್ವಚನ ನೀಡಿದರು..**

**ನೆಲಮಂಗಲ ಅಡೇಪೇಟೆ ಶ್ರೀಬಸವೇಶ್ವ ರಯುವಕ ಸಮಿತಿವತಿಯಿಂದ ಹಮ್ಮಿಕೊಂಡಿದ್ದ ಧರ್ಮಜಾಗೃತಿ ಸಮಾರಂಭದಲ್ಲಿ ಉಜ್ಜಯಿನಿ ಶ್ರೀಶ್ರೀ1008 ಜಗದ್ಗುರು ಸಿದ್ದಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು ಇಷ್ಟಲಿಂಗಮಹಾಪೂಜೆಯನ್ನು ನೆರವೇರಿಸಿದರು.**

# ಪಟಾಕಿ ತಯಾರಿಕಾ ಘಟಕದಲ್ಲಿ ಭೀಕರ ಸ್ಫೋಟ



**ಆಂಧ್ರಪ್ರದೇಶ:** ಮತ್ತೆ ಪಟಾಕಿ ಘಟಕದಲ್ಲಿ ಭೀಕರ ದುರಂತ ಸಂಭವಿಸಿದ್ದು, ಕನಿಷ್ಠ 18 ಮಂದಿ ಸಾವನ್ನಪ್ಪಿರುವುದಾಗಿ ಶಂಕಿಸಲಾಗಿದೆ. ಕಾಕಿನಾಡ ಜಿಲ್ಲೆಯ ಸಾಮಲಕೋಟ ಮಂಡಲದ ವೆಟ್ಲ ಪಾಲಂ ಗ್ರಾಮದ ಬಳಿ ಇರುವ 'ಸೂರ್ಯ ಶ್ರೀ' ಪಟಾಕಿ ತಯಾರಿಕಾ ಘಟಕದಲ್ಲಿ ಇಂದು (ಫೆಬ್ರವರಿ 28) ಮಧ್ಯಾಹ್ನ ಆಕಸ್ಮಿಕವಾಗಿ ಭಾರೀ ಸ್ಫೋಟ ಸಂಭವಿಸಿದೆ. ಘಟನೆಯ ವೇಳೆ ಸುಮಾರು 35 ಕಾರ್ಮಿಕರು ಘಟಕದೊಳಗೆ ಕೆಲಸ ಮಾಡುತ್ತಿದ್ದರು ಎಂದು ತಿಳಿದುಬಂದಿದೆ.

**ಘಟನೆಯ ವಿವರ:**ವೆಟ್ಲ ಪಾಲಂ ಮತ್ತು ಜಿ.ಮೇಡಪಾಡು ನಡುವಿನ ಕೃಷಿಭೂಮಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಈ ಪಟಾಕಿ ಘಟಕದಲ್ಲಿ ಮೊದಲು ಬೆಂಕಿ ಕಾಣಿಸಿಕೊಂಡಿದ್ದು, ಕೆಲವೇ ಕ್ಷಣಗಳಲ್ಲಿ ಅದು ಭಾರೀ ಸ್ಫೋಟಗೊಂಡಿದೆ. ಸ್ಫೋಟಗೊಂಡ ತಕ್ಷಣ ಮೃತದೇಹಗಳು ಘಟನಾ ಸ್ಥಳದಿಂದ ದೂರದ ಹೊಲಗಳವರೆಗೂ ಬಿದ್ದಿವೆ. ದೇಹದ ಅಂಗಾಂಗಗಳು ಚದುರಿಹೋಗಿರುವುದರಿಂದ ಮೃತರನ್ನು ಗುರುತಿಸಲು ಕಷ್ಟವಾಗಿದೆ.

ಪ್ರಾಥಮಿಕ ಮಾಹಿತಿಯ ಪ್ರಕಾರ ಮೃತಪಟ್ಟವರಲ್ಲಿ ಹೆಚ್ಚಿನವರು ಮಹಿಳಾ ಕಾರ್ಮಿಕರು ಎನ್ನಲಾಗಿದೆ. ದೈನಂದಿನ ಕೂಲಿಗಾಗಿ ಕೆಲಸ ಮಾಡುತ್ತಿದ್ದರು. ಇನ್ನೂ ಹಲವರು ಗಂಭೀರವಾಗಿ ಗಾಯಗೊಂಡಿದ್ದು, ಅವರನ್ನು ತಕ್ಷಣ ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದೆ. ಗಾಯಾಳುಗಳನ್ನು ಚಿಕಿತ್ಸೆಗಾಗಿ ಕಾಕಿನಾಡ ನಗರಕ್ಕೆ ಸ್ಥಳಾಂತರಿಸುವ ಕಾರ್ಯವೂ ನಡೆಯುತ್ತಿದೆ.

ಸ್ಫೋಟದ ಪ್ರಭಾವದಿಂದ ಸುತ್ತಮುತ್ತಲಿನ ಹಲವು ಮನೆಗಳು ಹಾನಿಗೊಳಗಾಗಿವೆ. ಕಿಟಕಿಗಳ ಗಾಜುಗಳು ಒಡೆದುಹೋಗಿದ್ದು, ಗೋಡೆಗಳಲ್ಲಿ ಬಿರುಕುಗಳು ಕಾಣಿಸಿಕೊಂಡಿವೆ. ಗ್ರಾಮಸ್ಥರು ಭಯಭೀತರಾಗಿದ್ದು, ಪ್ರದೇಶದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದೆ. ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿಯನ್ನು ನಿಯಂತ್ರಿಸಲು ಹರಸಾಹಸ ಪಡುತ್ತಿದ್ದು, ಸಂಪೂರ್ಣವಾಗಿ ಜ್ವಾಲೆ ನಂದಿಸಲು ಸಾಕಷ್ಟು ಸಮಯ ಬೇಕಾಗಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**ಸಿಎಂ ಚಂದ್ರಬಾಬು ನಾಯ್ಡು ಸಂತಾಪ ಸೂಚನೆ:**ಘಟನೆಯ ಮಾಹಿತಿ ತಿಳಿದ ತಕ್ಷಣ ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರು ಗೃಹ ಸಚಿವರಿಗೆ ತುರ್ತು ಸೂಚನೆ ನೀಡಿ ಸ್ಥಳಕ್ಕೆ ತೆರಳುವಂತೆ ಆದೇಶಿಸಿದ್ದಾರೆ. ಹಿರಿಯ ಅಧಿಕಾರಿಗಳೊಂದಿಗೆ ದೂರವಾಣಿ ಮೂಲಕ ಮಾತುಕತೆ ನಡೆಸಿದ ಅವರು, ಪರಿಹಾರ ಕಾರ್ಯಗಳನ್ನು ವೇಗಗೊಳಿಸುವಂತೆ ನಿರ್ದೇಶನ ನೀಡಿದ್ದಾರೆ. ಸಂತ್ರಸ್ತ ಕುಟುಂಬಗಳಿಗೆ ಸರ್ಕಾರದಿಂದ ಅಗತ್ಯ ಸಹಾಯ ಒದಗಿಸಲಾಗುವುದು ಎಂದು ಭರವಸೆ ನೀಡಿದ್ದಾರೆ.

**ಉಪಮುಖ್ಯಮಂತ್ರಿ ಪವನ್ ಕಲ್ಯಾಣ್ ಸಂತಾಪ:**ಉಪ ಮುಖ್ಯಮಂತ್ರಿ ಪವನ್ ಕಲ್ಯಾಣ್ ಹಾಗೂ ಸಚಿವರು ಕೂಡ ದುರ್ಘಟನೆ ಕುರಿತು ದುಃಖ ವ್ಯಕ್ತಪಡಿಸಿದ್ದಾರೆ. ಮೃತರ ಕುಟುಂಬಗಳಿಗೆ ಸಂತಾಪ ಸೂಚಿಸಿರುವ ಅವರು, ಸರ್ಕಾರ ಎಲ್ಲ ರೀತಿಯಲ್ಲೂ ಬೆಂಬಲ ನೀಡಲಿದೆ ಎಂದು ತಿಳಿಸಿದ್ದಾರೆ.

ಮೃತರ ಗುರುತಿನ ಪ್ರಕ್ರಿಯೆ ಹಾಗೂ ಸ್ಫೋಟದ ನಿಖರ ಕಾರಣ ಪತ್ತೆಹಚ್ಚಲು ವಿಶೇಷ ತನಿಖಾ ತಂಡ ರಚನೆ ಸಾಧ್ಯತೆ ಇದೆ.

# ಅಲ್ಪಾಯುಷಿ ಎಂದು ಹೇಳಿದ್ದ ಜ್ಯೋತಿಷಿ,ಯುವತಿ ಆತ್ಮಹತ್ಯೆ



**ಬೆಂಗಳೂರು:** ಜ್ಯೋತಿಷಿಯೊಬ್ಬರು "ಅಲ್ಪಾಯುಷಿ" ಎಂದು ಭವಿಷ್ಯ ನುಡಿದ ಹಿನ್ನೆಲೆಯಲ್ಲಿ ಆತಂಕ ಮತ್ತು ಮಾನಸಿಕ ಒತ್ತಡಕ್ಕೊಳಗಾಗಿದ್ದ ಇಪ್ಪತ್ತೊಂಬತ್ತು ವರ್ಷದ ತಾಂತ್ರಿಕ ಕ್ಷೇತ್ರದ ಯುವತಿ ನೇಣುಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ದುಃಖದ ಘಟನೆ ನಗರದ ಎಂಇಐ ಲೇಔಟ್ ಪ್ರದೇಶದಲ್ಲಿ ನಡೆದಿದೆ. ಘಟನೆ ಸಂಬಂಧ ಬಾಗಲಗುಂಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ.

ಮೃತೆಯನ್ನು ವಿದ್ಯಾಜ್ಯೋತಿ ಎಂದು ಗುರುತಿಸಲಾಗಿದೆ. ಉಮೇಶ್–ಕವಿತಾ ದಂಪತಿಯ ಎರಡನೇ ಮಗಳು ವಿದ್ಯಾ ಖಾಸಗಿ ಎಂಜಿನಿಯರಿಂಗ್ ಸಂಸ್ಥೆಯಲ್ಲಿ ಉದ್ಯೋಗದಲ್ಲಿದ್ದು, ಮನೆಯಿಂದಲೇ ಕಾರ್ಯನಿರ್ವಹಿಸುತ್ತಿದ್ದರು. ಕೆಲಸದಲ್ಲಿ ನಿಯಮಿತತೆ, ಕುಟುಂಬದ ಮೇಲೆ ಪ್ರೀತಿ ಹಾಗೂ ಮಿತಭಾಷಿತ್ವದಿಂದ ಪರಿಚಿತರಾಗಿದ್ದ ಯುವತಿಯಾಗಿದ್ದಳು ಎಂದು ಬಂಧುಗಳು ತಿಳಿಸಿದ್ದಾರೆ.

ಕುಟುಂಬದವರ ಮಾಹಿತಿ ಪ್ರಕಾರ, ಕೆಲ ದಿನಗಳ ಹಿಂದೆ ಜ್ಯೋತಿಷಿಯೊಬ್ಬರು ವಿದ್ಯಾಳಿಗೆ "ಅಲ್ಪಾಯುಷಿ" ಎಂದು ಹೇಳಿದ್ದಾರಂತೆ. ಈ ಹೇಳಿಕೆ ಯುವತಿಯ ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರಿತ್ತು ಎನ್ನಲಾಗಿದೆ. ಮಗಳ ಮನೋಸ್ಥಿತಿ ಕುಗ್ಗಬಾರದೆಂದು ಪೋಷಕರು ಆಕೆಗೆ ಧೈರ್ಯ ತುಂಬಲು ಹಾಗೂ ಆತಂಕ ನಿವಾರಣೆಗೆ ಸಾಧ್ಯವಾದ ಎಲ್ಲ ಕ್ರಮಗಳನ್ನು ಕೈಗೊಂಡಿದ್ದರು.

ಜ್ಯೋತಿಷಿಯ ಸಲಹೆಯಂತೆ ಒಂಬತ್ತು ದಿನಗಳ ಪೂಜೆ ಕೈಗೊಳ್ಳಲಾಗಿತ್ತು. ಪ್ರತಿದಿನವೂ ವಿಧಿವಿಧಾನಗಳೊಂದಿಗೆ ಪೂಜೆ ನಡೆಯುತ್ತಿತ್ತು. ಒಂಬತ್ತನೇ ದಿನ ಮಾರಮ್ಮ ದೇವರಿಗೆ ತಾಳಿ ಅರ್ಪಿಸುವಂತೆ ಸೂಚನೆ ನೀಡಲಾಗಿತ್ತು. ಅದರಂತೆ ಪೂಜೆಯ ಕೊನೆಯ ದಿನ ಸಂಜೆ ದೇವಸ್ಥಾನಕ್ಕೆ ತೆರಳಲು ಕುಟುಂಬ ಸಕಲ ಸಿದ್ಧತೆ ಮಾಡಿಕೊಂಡಿತ್ತು. ಪೂಜೆ ನೆರವೇರಿದ ಬಳಿಕ ಸಮಸ್ಯೆಗಳು ನಿವಾರಣೆಯಾಗುತ್ತವೆ ಎಂಬ ಭರವಸೆಯಲ್ಲಿ ಕುಟುಂಬದವರು ಇದ್ದರು ಎನ್ನಲಾಗಿದೆ.

ಇದರ ನಡುವೆ, ವಿದ್ಯಾ ಕೊಡಗು ಮೂಲದ ಯುವಕನನ್ನು ಪ್ರೀತಿಸುತ್ತಿದ್ದು, ಎರಡೂ ಕುಟುಂಬಗಳ ಒಪ್ಪಿಗೆಯೊಂದಿಗೆ ಮದುವೆ ಮಾತುಕತೆಗಳು ನಡೆದಿದ್ದವು. ಮಗಳ ಇಷ್ಟವೇ ಮುಖ್ಯವೆಂದು ಪೋಷಕರು ಮದುವೆ ಸಿದ್ಧತೆಗಳನ್ನು ಮುಂದುವರೆಸುತ್ತಿದ್ದರು. ಶೀಘ್ರದಲ್ಲೇ ಹಸೆಮಣೆ ಏರಬೇಕಿದ್ದ ಯುವತಿಯ ಜೀವನ ಹೀಗೆ ದುಃಖದ ಅಂತ್ಯ ಕಂಡಿರುವುದು ಕುಟುಂಬಸ್ಥರನ್ನು ಬೆಚ್ಚಿಬೀಳಿಸಿದೆ.

ಘಟನೆಯ ದಿನ, ಒಂಬತ್ತನೇ ಪೂಜೆಯ ಮಧ್ಯಾಹ್ನ ಊಟದ ಬಳಿಕ ವಿದ್ಯಾ ತನ್ನ ಕೊಠಡಿಗೆ ತೆರಳಿದ್ದಳು. ಕೆಲಸದಲ್ಲಿರಬಹುದು ಎಂದು ಭಾವಿಸಿದ ಪೋಷಕರು ಅವಳನ್ನು ತೊಂದರೆಪಡಿಸಲಿಲ್ಲ. ಸಂಜೆ ಸುಮಾರು ಎಂಟು ಗಂಟೆ ವೇಳೆಗೆ ದೇವಸ್ಥಾನಕ್ಕೆ ತೆರಳಲು ತಾಯಿ ಕರೆದರೂ ಯಾವುದೇ ಪ್ರತಿಕ್ರಿಯೆ ಸಿಗಲಿಲ್ಲ. ಹಲವು ಬಾರಿ ಕರೆದು ನೋಡಿದರೂ ಬಾಗಿಲು ತೆರೆಯದ ಹಿನ್ನೆಲೆಯಲ್ಲಿ ಅನುಮಾನಗೊಂಡ ಕುಟುಂಬಸ್ಥರು ಕಿಟಕಿಯಿಂದ ಒಳಗೆ ನೋಡಿದಾಗ, ವಿದ್ಯಾ ನೇಣುಬಿಗಿದ ಕೊಂಡಿರುವುದು ಕಂಡುಬಂದಿದೆ. ಈ ದೃಶ್ಯ ಕಂಡ ಕುಟುಂಬಸ್ಥರು ಆಕ್ರಂದನಗೊಳಗಾದರು. ತಕ್ಷಣವೇ ಪೊಲೀಸರಿಗೆ ಮಾಹಿತಿ ನೀಡಲಾಗಿದೆ.

ಮಾಹಿತಿ ಪಡೆದ ಪೊಲೀಸರು ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದರು. ಘಟನಾ ಸ್ಥಳದ ಮಹಜರು ಮಾಡಿಕೊಂಡು ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ರವಾನೆ ಮಾಡಲಾಗಿದೆ. ಮರಣೋತ್ತರ ಪರೀಕ್ಷೆಯ ವರದಿ ಬಂದ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಮಗಳನ್ನು ಕಳೆದುಕೊಂಡ ಉಮೇಶ್–ಕವಿತಾ ದಂಪತಿ ಶೋಕಸಾಗರದಲ್ಲಿ ಮುಳುಗಿದ್ದು, "ಮಗಳ ಸಂತೋಷವೇ ನಮ್ಮ ಆಶಯವಾಗಿತ್ತು; ಅವಳ ಇಷ್ಟದಂತೆ ಎಲ್ಲವನ್ನೂ ನಡೆಸುತ್ತಿದ್ದೆವು" ಎಂದು ಕಣ್ಣೀರಿನಿಂದ ಹೇಳಿದ್ದಾರೆ. ಬಂಧುಗಳು ಹಾಗೂ ನೆರೆಹೊರೆಯವರು ಕುಟುಂಬಕ್ಕೆ ಧೈರ್ಯ ತುಂಬಲು ಪ್ರಯತ್ನಿಸುತ್ತಿದ್ದಾರೆ.

ಈ ಘಟನೆ ಜ್ಯೋತಿಷ್ಯ ಹೇಳಿಕೆಗಳ ಪರಿಣಾಮ, ಮಾನಸಿಕ ಒತ್ತಡ ಹಾಗೂ ಕುಟುಂಬದ ಭಾವನಾತ್ಮಕ ಸ್ಥಿತಿಗಳ ಕುರಿತು ಹಲವಾರು ಪ್ರಶ್ನೆಗಳನ್ನು ಎಬ್ಬಿಸಿದೆ. ಪೊಲೀಸ್ ತನಿಖೆ ಮುಂದುವರಿದಿದ್ದು, ಎಲ್ಲಾ ಆಯಾಮಗಳನ್ನೂ ಪರಿಶೀಲಿಸಲಾಗುತ್ತಿದೆ.

RAJARATHA CYBER
All Online Services Under One Roof!
• Aadhaar, PAN Card, Voter ID, Ration Card
• e-Khata, Senior Citizen Card & Other Government Services
• Address: Junior College Road, Nelamangala
Contact: 9886926812 for medicts

Printed by: R Ramesh, Published by Abhishek D R On Behalf of Abhishek D R, Printed at Maruthi Enterprises. No.1159, Near Floor Mill, D Cross, Doddaballapura Town, Bengaluru rural, Karnataka - 561203, Published at No. 3769/1, Rajarathna Nivasa, KSRTC Layout, Near Ambedkar Stadium, Rayan Nagara, Nelamangala. Editor Abhishek D R.